# Visit of External Affairs Minister to Kingdom of Bahrain (November 24-25, 2020)

November 25, 2020

---

## ಬಹ್ರೇನ್ ಸಾಮ್ರಾಜ್ಯಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವರ ಭೇಟಿ (ನವೆಂಬರ್ 24-25, 2020)

ನವೆಂಬರ್ 25, 2020

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ರವರು ಬಹ್ರೇನ್‌ಗೆ ಎರಡು ದಿನಗಳ ರಾಜ್ಯ ಪ್ರವಾಸವನ್ನು ಇಂದು ಮುಕ್ತಾಯಗೊಳಿಸಿದರು. ಪ್ರವಾಸದ ಸಮಯದಲ್ಲಿ, ಅವರು ಬಹ್ರೇನ್‌ನ ಸುಲ್ತಾನ್ ರಾಜಕುಮಾರ ಸಲ್ಮಾನ್ ಬಿನ್ ಹಮದ್ ಅಲ್ ಖಲೀಫಾ, ದಿ ಕ್ರೌನ್ ಪ್ರಿನ್ಸ್, ಉಪ ಸುಪ್ರೀಂ ಕಮಾಂಡರ್ ಮತ್ತು ಪ್ರಧಾನ ಮಂತ್ರಿ ಮತ್ತು ಬಹ್ರೇನ್‌ನ ಉಪ ಪ್ರಧಾನ ಮಂತ್ರಿ ಶೇಖ್ ಅಲಿ ಬಿನ್ ಖಲೀಫಾ ಅಲ್ ಖಲೀಫಾ ರವರನ್ನು ಭೇಟಿಯಾದರು. ಅವರು ತಮ್ಮ ಪ್ರತಿರೂಪವಾದ ಬಹ್ರೇನ್‌ನ ವಿದೇಶಾಂಗ ಸಚಿವ ಶ್ರೇಷ್ಠ ಡಾ.ಅಬ್ದುಲ್ಲಾತಿಫ್ ಬಿನ್ ರಶೀದ್ ಅಲ್ ಜಯಾನಿ ರವರೊಂದಿಗೆ ಚರ್ಚಿಸಿದರು.

ಈ ಸಮಯದಲ್ಲಿ, ಮಾಜಿ ಬಹ್ರೇನ್ ಪ್ರಧಾನ ಮಂತ್ರಿ ಖಲೀಫಾ ಬಿನ್ ಸಲ್ಮಾನ್ ಅಲ್ ಖಲೀಫಾ ರವರ ನಿಧನಕ್ಕೆ ಸರ್ಕಾರ ಮತ್ತು ಭಾರತದ ಜನರ ಪರವಾಗಿ ಬಹ್ರೇನ್ ನಾಯಕತ್ವಕ್ಕೆ ಡಾ.ಎಸ್.ಜೈಶಂಕರ್ ಸಂತಾಪ ಸೂಚಿಸಿದ್ದಾರೆ. ಇಂಡೋ–ಬಹ್ರೇನ್ ಸಂಬಂಧವನ್ನು ಬಲಪಡಿಸಲು ದಿವಂಗತ ಪ್ರಧಾನ ಮಂತ್ರಿ ನೀಡಿದ ಕೊಡುಗೆ ಮತ್ತು ಬಹ್ರೇನ್‌ನಲ್ಲಿನ ಭಾರತೀಯ ಸಮುದಾಯದ ಕಲ್ಯಾಣವನ್ನು ಅವರು ನೆನಪಿಸಿಕೊಂಡರು.

Covid-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ಭಾರತೀಯ ಸಮುದಾಯವನ್ನು ಬಹ್ರೇನ್‌ನಲ್ಲಿ (300,000 ಕ್ಕೂ ಹೆಚ್ಚು ಭಾರತೀಯರು) ಆತಿಥ್ಯ ವಹಿಸಿದ್ದಕ್ಕಾಗಿ ಹಾಗೂ ಭಾರತೀಯ ಸಮುದಾಯದ ಜನರ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದಕ್ಕಾಗಿ ವಿದೇಶಾಂಗ ಸಚಿವರು ಬಹ್ರೇನ್‌ಗೆ ಧನ್ಯವಾದ ಅರ್ಪಿಸಿದರು. ಬಹ್ರೇನ್‌ನ ನಾಯಕತ್ವವು ಬಹ್ರೇನ್‌ನ ಅಭಿವೃದ್ಧಿಯಲ್ಲಿ ಭಾರತೀಯ ಸಮುದಾಯದ ಕೊಡುಗೆ ಮತ್ತು Covid ಸಾಂಕ್ರಾಮಿಕ ರೋಗದ ಸಮಯದಲ್ಲಿ ಭಾರತವು ಔಷಧಿಗಳ ಪೂರೈಕೆ, ವೈದ್ಯಕೀಯ ಸಾಧನಗಳು ಮತ್ತು ವೈದ್ಯಕೀಯ ವೃತ್ತಿಪರರ ಮೂಲಕ ನೀಡಿದ ಸಹಾಯವನ್ನು ಶ್ಲಾಘಿಸಿತು. ಎರಡು ದೇಶಗಳು ತಮ್ಮ COVID- ಸಂಬಂಧಿತ ಸಹಕಾರವನ್ನು ಮತ್ತಷ್ಟು ಬಲಪಡಿಸುವುದನ್ನು ದೃಢಪಡಿಸಿದವು. ಎರಡು ದೇಶಗಳ ನಡುವಿನ 'ಏರ್ ಬಬಲ್' ವ್ಯವಸ್ಥೆಯ ಕಾರ್ಯಾಚರಣೆಯ ಬಗ್ಗೆ ಅವರು ತೃಪ್ತಿಯನ್ನು ವ್ಯಕ್ತಪಡಿಸಿದರು.

ಡಾ.ಎಸ್. ಜೈಶಂಕರ್ ರವರು ಬಹ್ರೇನ್‌ನ ವಿದೇಶಾಂಗ ಸಚಿವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಇಬ್ಬರು ಸಚಿವರು ದ್ವಿಪಕ್ಷೀಯ ವಿಷಯಗಳ ಮತ್ತು ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಚರ್ಚಿಸಿದರು, Covid ನಂತರದ ಸವಾಲುಗಳನ್ನು ಎದುರಿಸುವಲ್ಲಿ ಸಹಕಾರ ಮತ್ತು ಸಮನ್ವಯ ಸೇರಿದಂತೆ. ರಕ್ಷಣಾ ಮತ್ತು ಕಡಲ ಭದ್ರತೆ, ಬಾಹ್ಯಾಕಾಶ ತಂತ್ರಜ್ಞಾನ, ವ್ಯಾಪಾರ ಮತ್ತು ಹೂಡಿಕೆ, ಮೂಲಸೌಕರ್ಯ, ಐಟಿ, ಫಿನ್‌ಟೆಕ್, ಆರೋಗ್ಯ, ಹೈಡ್ರೋಕಾರ್ಬನ್‌ಗಳು ಮತ್ತು ನವೀಕರಿಸಬಹುದಾದ ಇಂಧನ ಸೇರಿದಂತೆ ಐತಿಹಾಸಿಕ ಭಾರತ–ಬಹ್ರೇನ್ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಅವರು ಒಪ್ಪಿಕೊಂಡರು. ಮುಂದಿನ ಕೆಲವು ತಿಂಗಳುಗಳಲ್ಲಿ ಭಾರತದಲ್ಲಿ ನಡೆಯಲಿರುವ ಮೂರನೇ ಭಾರತ–ಬಹ್ರೇನ್ ಹೈ ಜಂಟಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡುವಂತೆ ವಿದೇಶಾಂಗ ಸಚಿವರು ಬಹ್ರೇನ್‌ನ ವಿದೇಶಾಂಗ ಸಚಿವರಿಗೆ ಆಹ್ವಾನವನ್ನು ನವೀಕರಿಸಿದರು.

ಭೇಟಿಯ ಸಮಯದಲ್ಲಿ, ವಿದೇಶಾಂಗ ಸಚಿವರು ಬಹ್ರೇನ್‌ನಲ್ಲಿರುವ ಭಾರತೀಯ ಸಮುದಾಯದ ಮುಖಂಡರೊಂದಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಂವಹನ ನಡೆಸಿದರು. ಮನಮದಲ್ಲಿರುವ 200 ವರ್ಷಗಳಷ್ಟು ಹಳೆಯದಾದ ಶ್ರೀನಾಥ್ಜಿ (ಶ್ರೀ ಕೃಷ್ಣ) ದೇವಸ್ಥಾನಕ್ಕೆ ಭೇಟಿ ನೀಡಿದರು. ದೇವಾಲಯದ ಸುತ್ತಲಿನ 'ಲಿಟಲ್ ಇಂಡಿಯಾ' ಇಂಡೋ-ಬಹ್ರೇನ್ ಸ್ನೇಹದ ಸಂಕೇತವಾಗಿದೆ. ಅವರು ಬಹ್ರೇನ್‌ನ ರಾಷ್ಟ್ರೀಯ ವಸ್ತುಸಂಗ್ರಹಾಲಯಕ್ಕೂ ಭೇಟಿ ನೀಡಿದರು.

**ಮನಮಾ**
**ನವೆಂಬರ್ 25, 2020**

DISCLAIMER: This is an approximate translation. The original is available in English on MEA’s website and may be referred to as the official press release.